



ಸುತ್ತಾಡುವುದು ಅವಿಸ್ಮರಣೀಯ ಅನುಭವ. ಆ ತೋಪಿನಲ್ಲಿರುವ 64 ಮೀಟರ್ ಎತ್ತರದ, ಭೂಮಟ್ಟದಲ್ಲಿ 9 ಮೀಟರ್ ವ್ಯಾಸದ 'ಗ್ರಿಸ್ಲಿ ಜಯಂಟ್' ಎಂದು ಕರೆಯಲಾಗುವ ಒಂದು ಸಿಕ್ವಯ ವೃಕ್ಷವಿದೆ. ಆ ಮರ 2000 ವರ್ಷಕ್ಕೂ ಹಳೆಯದೆನ್ನಲಾಗಿದ್ದು, ಪ್ರಪಂಚದ 25ನೇ ಅತಿ ದೊಡ್ಡಮರವೆಂದು ಗುರುತಿಸಲಾಗಿದೆ.

ಯೋಸೆಮಿಟಿ ಮೂಲಕ ಹರಿಯುವ ಮೆರ್ಸ್ಡ್ ನದಿಯು ರ್‍ಯಾಫ್ಟಿಂಗ್ ಪ್ರಿಯರನ್ನು ಕೈಬೀಸಿ ಆಹ್ವಾನಿಸುತ್ತದೆ. ಮೀನು ಶಿಕಾರಿಯಲ್ಲಿ ಮೈಮರೆಯಲು ಕೂಡ ಅವಕಾಶವಿದೆ. ಅಲ್ಲಿನ ವನದಲ್ಲಿ ಮತ್ತು ಆಸುಪಾಸಿನಲ್ಲಿ ಸುಂದರವಾದ ಹಾಗೂ ಮಾಲಿನ್ಯ ಸೋಕದ ಸರೋವರಗಳಿವೆ. ನಾವು ಹೋದಾಗ ಪ್ರಕೃತಿಯನ್ನು ವರ್ಣಲೇಪನದಲ್ಲಿ ಸೆರೆ ಹಿಡಿಯುವುದರಲ್ಲಿ ಒಬ್ಬ ಅಜ್ಜಿ ಸರೋವರದ ತಟದಲ್ಲಿ ತಲ್ಲೀನರಾಗಿದ್ದರು. ಬೆಟ್ಟ ಮತ್ತು ಸಿಕ್ವಯ ವೃಕ್ಷಗಳಿಂದ ಸುತ್ತುವರಿದ ಬಾಸ್ ಸರೋವರದಲ್ಲಿನ ದೋಣಿವಿಹಾರ ಮನಸ್ಸನ್ನು ಹಗುರಗೊಳಿಸಿತು.

ಉದ್ಯಾನದಲ್ಲಿ ಅಸಂಖ್ಯ ಜಲಪಾತಗಳಿವೆ. ಅವುಗಳ ನೀರಿನ ಮೂಲ ಕರಗುವ ಹಿಮ. ಬೇಸಿಗೆಯ ಆರಂಭ ಮತ್ತು ನಡುವೆ ಜಲಪಾತಗಳು ಜೀವತುಂಬಿ ಭೋರ್ಗರೆಯುತ್ತಿರುತ್ತವೆ. ಬೇಸಿಗೆಯ ಅಂತ್ಯದ ವೇಳೆಗೆ ಹಿಮವು ಪೂರ್ಣ ಕರಗಿ ಮಾಯವಾದರೆ ಜಲಪಾತಗಳು ಪೂರ್ಣ ಒಣಗುವ ಸನ್ನಿವೇಶವೂ ಉಂಟು. ಬ್ರೈಡಲ್ ವೇಲ್ ಹಾಗೂ ಯೋಸೆಮಿಟಿ ಜಲಪಾತಗಳು ಅತಿ ಪ್ರಸಿದ್ಧ. ನಾವು ಹೋದ ಸಮಯದಲ್ಲಿ ನಮ್ಮ ಅದೃಷ್ಟವೋ ಏನೋ, 189 ಮೀಟರ್ ಎತ್ತರದಿಂದ ಧುಮುಕುವ ಬ್ರೈಡಲ್ ವೇಲ್‌ನಲ್ಲಿ ಬೃಹತ್ ಪ್ರಮಾಣದಲ್ಲಿ ಧಾರಾಕಾರವಾಗಿ ಹಾಲಿನ ಧಾರೆಯಂತೆ ನೀರು ಧುಮುಕುತ್ತಿತ್ತು. ಹಿಮ ಕರಗಿದ ನೀರು ಅತಿ ತಣ್ಣಗಿರುತ್ತದೆ. ಸ್ಥಳೀಯರು ಅಂತಹ ಕೊರೆಯುವ ನೀರಿನಲ್ಲೂ ಸಂಭ್ರಮದಿಂದ ಮೀಯುವುದು ನೋಡಿ ನಡುಗಿದೆ. ಚಳಿಗಾಲದಲ್ಲಿ ಹಿಮಪಾತದಿಂದ ರಸ್ತೆ, ಗಿಡ ಮರ, ಬೆಟ್ಟ ಗುಡ್ಡಗಳು ಹಿಮದ ಹೊದಿಕೆಯಿಂದ ಶ್ವೇತವರ್ಣಕ್ಕೆ ಬದಲಾಗಿರುತ್ತವೆ.

ಸಾವಿರ ವರ್ಷದಷ್ಟು ಹಳೆಯದಾದ ಒಂದು ಬೃಹತ್ ಸಿಕ್ವಯ ಮರದ ತುಂಡಿಗೆ ಪಾಲಿಶ್ ಮಾಡಿ ವಯೋಮಾನ ವೃತ್ತಗಳನ್ನು ಗುರುತಿಸಲಾಗಿದೆ. ನಮ್ಮ ಕೆಲವು ಕುಟುಂಬ ಸದಸ್ಯರು, ಕೃಷ್ಣದೇವರಾಯ, ಪುಲಿಕೇಶಿ, ಗುಪ್ತರ ಕಾಲಘಟ್ಟಗಳನ್ನು ಸಂಭ್ರಮದಿಂದ ಬೊಟ್ಟು ಮಾಡಿ ತೋರಿಸುತ್ತಿದ್ದರು. ಮಕ್ಕಳಿಂದ ಹಿರಿಯರವರೆಗೆ ಅಲ್ಲಿ ನಿಂತು ಸೆಲ್ಫಿ ತೆಗೆದುಕೊಳ್ಳುತ್ತಿದ್ದರು. ಯೋಸೆಮಿಟಿಯ ಇತಿಹಾಸವನ್ನು ಪರಿಚಯಿಸುವ ಮ್ಯೂಸಿಯಂ ನೋಡಲೇಬೇಕಾದ ಸ್ಥಳ.

ಯೋಸೆಮಿಟಿಯಲ್ಲಿ ನಮ್ಮ ಮೂವತ್ತನೇ ವಿವಾಹ ವಾರ್ಷಿಕೋತ್ಸವ ಆಚರಿಸಿದೆವು. ಬೆಳಗಿನಿಂದ ಸಾಯಂಕಾಲದವರೆಗೂ ಅಲ್ಲಿನ ಪ್ರಕೃತಿ ಮಡಿಲಲ್ಲಿ ಕಳೆದು, ಸವಿ ನೆನಪುಗಳೊಂದಿಗೆ ಹಿಂತಿರುವಾಗ ಮನಸ್ಸಿನಲ್ಲಿ, ಸಾ.ಶಿ. ಮರುಳಯ್ಯನರವರ 'ಸುಮ ಸುಂದರ ತರುಲತೆಗಳ ಬೃಂದಾವನ ಲೀಲೆ' ಕವಿತೆ ಅಲೆಯಾಗುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in